

ಚೀನಾದ ಹಾಂಗ್‌ಝೌನಲ್ಲಿ ನಡೆದಿದ್ದ ಏಷ್ಯನ್ ಗೇಮ್ಸ್‌ನಲ್ಲಿ ಚಿನ್ನದ ಪದಕ ಜಯಿಸಿದ ಭಾರತ ಮಹಿಳಾ ಕ್ರಿಕೆಟ್ ತಂಡದ ಸಂಭ್ರಮ

ಎಂಬ ಹಂತದಲ್ಲಿ ದೀಪ್ತಿ ಶರ್ಮಾ ತೋರಿದ ಛಲದಾಟವೇನೂ ಕಮ್ಮಿಯಿಲ್ಲ. ಅವರು ಗಳಿಸಿದ 72 ರನ್‌ಗಳು ಆಸ್ಟ್ರೇಲಿಯಾದ ಆಟಗಾರ್ತಿಯರಲ್ಲಿ ಸೋಲಿನ ಭಯ ಮೂಡಿಸಿದ್ದಂತೂ ನಿಜ. ಅಷ್ಟೇ ಅಲ್ಲ; ಕೆಳ ಕ್ರಮಾಂಕದಲ್ಲಿ ಸ್ನೇಹರಾಣಾ ಅವರ 38 ರನ್‌ಗಳೂ ಅಷ್ಟೇ ಮಹತ್ವದ್ದಾಗಿದ್ದವು. ಇವೆಲ್ಲವೂ ಕೊನೆಯ ಕ್ಷಣದವರೆಗೂ ಸೋಲೊಪ್ಪಿಕೊಳ್ಳದ ತಂಡದ ಮನೋಧರ್ಮವನ್ನು ತೋರಿಸುತ್ತವೆ ಅಲ್ಲವೇ?

ಇಂತಹ ಆಟಗಳೇ ಆಟಗಾರರು ಮತ್ತು ಅಭಿಮಾನಿಗಳಿಬ್ಬರಲ್ಲೂ ಆತ್ಮವಿಶ್ವಾಸ ಹೆಚ್ಚಿಸುತ್ತವೆ. ಆ ಮೂಲಕ ಆಟ ಬೆಳೆಯುತ್ತದೆ.

ಈ ಹಿಂದೆ 2000ರಲ್ಲಿ ಆಸ್ಟ್ರೇಲಿಯಾ ಎದುರಿನ ಫೈನಲ್‌ನಲ್ಲಿ ಸೋತಾಗ ಮತ್ತು 2017ರಲ್ಲಿ ಇಂಗ್ಲೆಂಡ್ ಎದುರು ಫೈನಲ್‌ನಲ್ಲಿ ಪರಾಭವಗೊಂಡಾಗಲೂ ಇದೇ ರೀತಿಯ ಛಲ ಭಾರತದಿಂದ ಕಂಡುಬಂದಿತ್ತು. ಆ ತಂಡದಲ್ಲಿದ್ದ ಹರ್ಮನ್‌ಪ್ರೀತ್ ಈಗ ನಾಯಕಿಯಾಗಿದ್ದಾರೆ. 36 ವರ್ಷದ ಹರ್ಮನ್ ಅವರು ನಿವೃತ್ತಿಯ ಹಾದಿಯಲ್ಲಿದ್ದಾರೆ. ಆದರೆ 152 ಏಕದಿನ ಪಂದ್ಯಗಳನ್ನು ಆಡಿರುವ ಅವರು ನಾಲ್ಕು ಸಾವಿರಕ್ಕೂ ಹೆಚ್ಚು ರನ್ ಗಳಿಸಿದ್ದಾರೆ. ಮಿಥಾಲಿ, ಜೂಲನ್ ಅವರೊಂದಿಗೆ ಆಡುತ್ತ ಬೆಳೆದ ಅನುಭವ ಅವರಿಗಿದೆ. ಸದ್ಯ ಇರುವ ತಂಡದಲ್ಲಿ ನವಪೀಳಿಗೆ ಮತ್ತು ಅನುಭವಿ ಆಟಗಾರರ ಸಮ್ಮಿಶ್ರಣವಿದೆ. ಅದನ್ನು ಅವರು ಯಾವ ರೀತಿ ನಿಭಾಯಿಸುವರು ಎಂಬ ಕುತೂಹಲ ಈಗ ಗರಿಗೆದರಿದೆ.

ದೇಶಿ ಕ್ರಿಕೆಟ್‌ನ 'ರನ್ ಯಂತ್ರ' ಎಂದೇ ಪ್ರಸಿದ್ಧರಾಗಿದ್ದ ಮುಂಬೈನ ಅಮೋಲ್ ಮುಜುಂದಾರ್ ಅವರು ತಂಡದ ಮುಖ್ಯ ಕೋಚ್ ಆಗಿದ್ದಾರೆ. ಈ ವಿಶ್ವಕಪ್ ಟೂರ್ನಿಯು ಅವರಿಗೂ ಸತ್ವ ಪರೀಕ್ಷೆಯೇ ಹೌದು. ಹಲವು ಪ್ರಯೋಗಗಳ ಮೂಲಕ ಬ್ಯಾಟಿಂಗ್ ಮತ್ತು ಬೌಲಿಂಗ್ ವಿಭಾಗವನ್ನು ಶಕ್ತಿಯುತಗೊಳಿಸುವ ಅಮೋಲ್ ಈಗ ಫೀಲ್ಡಿಂಗ್



ಇಂಗ್ಲೆಂಡ್ ತಂಡದ ನಾಯಕಿ ನ್ಯಾಟ್ ಸಿವರ್ ಬ್ರಂಟ್

ಸುಧಾರಣೆಗೆ ಹೆಚ್ಚು ಒಲವು ತೋರಿದ್ದಾರೆ. ಆಸ್ಟ್ರೇಲಿಯಾ ಎದುರಿನ ಪಂದ್ಯಗಳಲ್ಲಿ ಕ್ಯಾಚ್‌ಗಳನ್ನು ಕೈಚೆಲ್ಲಿದ್ದನ್ನು ಗಂಭೀರವಾಗಿ ಪರಿಗಣಿಸಿದ್ದಾರೆ. 'ಕ್ಯಾಚ್ ಮ್ಯಾಚ್ ಗೆಲ್ಲಿಸಬಹುದು' ಎಂಬ ಸತ್ಯವನ್ನು ಆಟಗಾರ್ತಿಯರಿಗೆ ಅರುಹುತ್ತಿದ್ದಾರೆ. ಆಸ್ಟ್ರೇಲಿಯಾ, ಇಂಗ್ಲೆಂಡ್ ಮತ್ತು ಕಿವೀಸ್ ಆಟಗಾರ್ತಿಯರನ್ನು ಕಟ್ಟಿಹಾಕಲು ಸರ್ವರೀತಿಯಿಂದಲೂ ಸಿದ್ಧರಾಗುವ ಒತ್ತಡ ಆತಿಥೇಯರ ಮೇಲೆ ಇದೆ.

ಮಹಿಳಾ ಕ್ರಿಕೆಟ್ ವ್ಯಾಪ್ತಿಯು ಜಾಗತಿಕವಾಗಿಯೂ ವಿಸ್ತಾರಗೊಳ್ಳುತ್ತಿರುವುದು ಆಶಾದಾಯಕ ಬೆಳವಣಿಗೆ. ಮುಂಬರುವ ಲಾಸ್‌ಏಂಜಲೀಸ್ ಒಲಿಂಪಿಕ್ ಕೂಟದಲ್ಲಿಯೂ ಕ್ರಿಕೆಟ್ ಸ್ಥಾನ ಪಡೆದಿದೆ. ಆ ನಿಟ್ಟಿನಲ್ಲಿ ಮಹಿಳಾ ತಂಡದ ಮೇಲೆ ಹೆಚ್ಚು ನಿರೀಕ್ಷೆ ಇದೆ. ಭಾರತಕ್ಕೆ ಒಲಿಂಪಿಕ್ ಪದಕವೊಂದನ್ನು ತಂದುಕೊಡುವ ಸಾಮರ್ಥ್ಯ ಕ್ರಿಕೆಟ್ ತಂಡಕ್ಕಿದೆ ಎಂಬ ವಿಶ್ವಾಸ ಈಗಾಗಲೇ ಮೂಡಿದೆ. ಮುಂದಿನ ವರ್ಷ ನಡೆಯಲಿರುವ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಆಡುವ ತಂಡವನ್ನು ಸಿದ್ಧಗೊಳಿಸುವ ಪ್ರಕ್ರಿಯೆ ಕೂಡ ಈ ಏಕದಿನ ವಿಶ್ವ ಟೂರ್ನಿಯ ಮೂಲಕ ನಡೆಯಲಿದೆ.



ಪಾಕಿಸ್ತಾನ ತಂಡದ ನಾಯಕಿ ಸನಾ ಫಾತೀಮಾ

ಏಕೆಂದರೆ; ಭಾರತದಲ್ಲಿ ಪುರುಷರ ಕ್ರಿಕೆಟ್ ವಿಭಾಗದಲ್ಲಿ ದೇಶಿ ಟೂರ್ನಿಗಳು ಹೆಚ್ಚಿವೆ. ಆದರೆ ಅಷ್ಟು ಸಂಖ್ಯೆಯಲ್ಲಿ ಮಹಿಳೆಯರ ದೇಶಿ ಟೂರ್ನಿಗಳು ಇಲ್ಲ. ಟೆಸ್ಟ್ ಪಂದ್ಯಗಳ ಸಂಖ್ಯೆಯೂ ಕಡಿಮೆ. ಆದ್ದರಿಂದ ದ್ವಿಪಕ್ಷೀಯ ಸರಣಿಗಳು ಮತ್ತು ಯಾವುದೇ ಮಾದರಿಯ ವಿಶ್ವಕಪ್ ಟೂರ್ನಿಗಳಲ್ಲಿಯೇ ತಮ್ಮ ಪ್ರತಿಭೆ ಸಾಬೀತು ಮಾಡಿ ಆಯ್ಕೆಗಾರರ ಗಮನ ಸೆಳೆಯುವ ಒತ್ತಡ ಆಟಗಾರ್ತಿಯರಿಗೆ ಇದೆ. ಇದೆಲ್ಲದರ ಜೊತೆಗೆ ಇವತ್ತಿಗೂ ಮಹಿಳಾ ಕ್ರಿಕೆಟ್ ಬಗ್ಗೆ ಇರುವ 'ನಿರಾಸಕ್ತಿ'ಯನ್ನು ತೊಡೆದುಹಾಕುವ ಸವಾಲೂ ಅವರ ಮುಂದಿದೆ. ಅದಕ್ಕೆಲ್ಲವೂ ಒಂದು ವಿಶ್ವಕಪ್ ವಿಜಯ ಉತ್ತರವಾಗಬಹುದೇನೋ?

## ಬೆಂಗಳೂರಿಗಿಲ್ಲ ಭಾಗ್ಯ!

ಈ ಟೂರ್ನಿಯ ಉದ್ಘಾಟನೆ ಪಂದ್ಯವು ಬೆಂಗಳೂರಿನಲ್ಲಿ ನಡೆಯಬೇಕಿತ್ತು. ಅಲ್ಲದೇ ಭಾರತ ಆಡುವ ಕೆಲ ಪಂದ್ಯಗಳೂ ಈ ಮುಂಚೆ ಆಯೋಜನೆಗೊಂಡಿದ್ದವು.

ಆದರೆ ಕಳೆದ ಜೂನ್‌ನಲ್ಲಿ ನಡೆದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ವಿಜಯೋತ್ಸವದ ಸಂದರ್ಭದಲ್ಲಿ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಕಾಲ್ತುಳಿತ ಸಂಭವಿಸಿ 11 ಜನ ಮೃತಪಟ್ಟಿದ್ದರು.

ಅದರಿಂದಾಗಿ ಕ್ರೀಡಾಂಗಣದಲ್ಲಿ ಪಂದ್ಯಗಳನ್ನು ಆಯೋಜಿಸುವುದು ಸುರಕ್ಷಿತವಲ್ಲ ಎಂದು ರಾಜ್ಯ ಸರ್ಕಾರವು ರಚಿಸಿದ್ದ ನಿಯೋಗವೊಂದು ವರದಿ ಸಲ್ಲಿಸಿತ್ತು. ಪಂದ್ಯ ನಡೆಸಲು ಅನುಮತಿ ನೀಡಬೇಕೆಂದರೆ, ಹತ್ತಾರು ಷರತ್ತುಗಳನ್ನು ಪೂರೈಸಲು ಸರ್ಕಾರ ತಿಳಿಸಿತ್ತು.

ಕಾಲ್ತುಳಿತ ಪ್ರಕರಣ ಸಂಭವಿಸಿದ್ದರ ಹಿಂದೆ ರಾಜ್ಯ ಸರ್ಕಾರದ ಲೋಪವೂ ಇತ್ತೆಂಬುದು ಗುಟ್ಟೇನಲ್ಲ. ಆದರೆ ಅದನ್ನು ಮುಚ್ಚಿಟ್ಟುಕೊಳ್ಳುವ ಪ್ರಯತ್ನದಲ್ಲಿ ಚಿನ್ನಸ್ವಾಮಿ ಕ್ರೀಡಾಂಗಣವನ್ನು ಗುರಿ ಮಾಡಲಾಯಿತು.

ಮಹಿಳಾ ಕ್ರಿಕೆಟ್ ಪಂದ್ಯಗಳ ಆಯೋಜನೆಗೆ ಚಿನ್ನಸ್ವಾಮಿ ಕ್ರೀಡಾಂಗಣ ಅತ್ಯಂತ ಸೂಕ್ತ ವೇದಿಕೆ ಎಂಬುದು ಈ ಹಿಂದೆಯೂ ಸಾಬೀತಾಗಿದೆ. 80ರ ದಶಕದಲ್ಲಿ ಮೊದಲ ಮಹಿಳಾ ಟೆಸ್ಟ್ ನಡೆದಿದ್ದೇ ಇಲ್ಲ. ಅಷ್ಟೇ ಏಕೆ; ಹೋದ ವರ್ಷ ಡಬ್ಲ್ಯುಪಿಎಲ್ ಪಂದ್ಯಗಳು ನಡೆದಾಗ ದಾಖಲೆಯ ಸಂಖ್ಯೆಯಲ್ಲಿ ಪ್ರೇಕ್ಷಕರು ಸೇರಿದ್ದರು. ಪ್ರತಿ ಪಂದ್ಯದಲ್ಲಿಯೂ ಜನ ಸೇರಿದ್ದು ವಿಶೇಷ. ಈ ಹಿಂದೆಯೂ ಇಲ್ಲಿ ಹಲವು ವಿಶ್ವಕಪ್ ಪಂದ್ಯಗಳೂ ನಡೆದಿವೆ. ಆದರೆ ಈಗ 'ರಾಜಕೀಯದಾಟ'ದಲ್ಲಿ ಕ್ರಿಕೆಟ್ ಪಂದ್ಯಗಳು ಎತ್ತಂಗಡಿಯಾದವು.